## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 02.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ**

**6.** ನಾನು ಬಿ.ಕಾಂ. ಪದವಿಧರನಾಗಿದ್ದೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷ್ಷೆ ಓದಲು ಬರೆಯಲು ಬರುತ್ತದೆ. ನಾವು ಸಹ ಸೊಸೈಟಿಯ ಹಳೇಯ ಸದಸ್ಯರು ಹಾಗೂ ನಮ್ಮನ್ನು ನಿರ್ಲಕ್ಷಿಸಿರುತ್ತಾರೆಂದು ಈ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿ ನಂ.1 ಮತ್ತು 2 ಯಾವ ಇಸ್ವಿಯಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. 1981 ರಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಗೃಹ ನಿರ್ಮಾಣ ಸಂಘದವರ ಕಾರ್ಯಚಟುವಟಿಕೆಗಳ ಬಗ್ಗೆ ನನಗೆ ಮಾಹಿತಿ ಇದೆ. ಸಂಘದವರು ಮನೆ ಮಂಜೂರು ಮಾಡಬೇಕಾದರೆ ಸದಸ್ಯರು ಅರ್ಜಿ ನೀಡಬೇಕಾಗುತ್ತದೆ ಎಂದರೆ ಸರಿ. ನಾನು ಸಹ ನನಗೆ ಮನೆ ಮಂಜೂರು ಮಾಡಿ ಎಂದು 15 ಅರ್ಜಿಗಳನ್ನು ಪ್ರತಿವಾದಿ ನಂ.1 ಮತ್ತು 2 ರವರಿಗೆ ಸಲ್ಲಿಸಿದ್ದೇನು. ಆ ರೀತಿ ಅರ್ಜಿ ಸಲ್ಲಿಸಿದ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ ಅವುಗಳನ್ನು ನ್ಯಾಯಾಲಯಕ್ಕೆ ಹಾರಜಪಡಿಸಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಬೇಕಿದ್ದರೆ ಹಾಜರಪಡಿಸಬಹುದು ಎಂದು ನುಡಿಯುತ್ತಾರೆ. ಮದನಿ ಸೊಸೈಟಿಯವರು 800 ರಿಂದ 900 ಪ್ಲಾಟ್‌ಗಳನ್ನು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟ್‌ಗಳು ಈಗ ಮಾರಾಟವಾಗಿದೆ ಎಂದರೆ ಸಾಕ್ಷಿ ಅದು ನನಗೆ ಹೇಗೆ ಗೊತ್ತು ಸೊಸೈಟಿಯವರಿಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಪ್ಲಾಟ್‌ಗಳು ಯಾರು ಯಾರಿಗೆ ಮಾರಾಟವಾಗಿವೆ ಎಂಬುದರ ಬಗ್ಗೆ ದಾವೆಯಲ್ಲಿ ನಮೂದಿಸಿಲ್ಲ ಹಾಗೂ ಪ್ಲಾಟ್ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

7. ಪ್ರತಿವಾದಿ ನಂ.1 ಮತ್ತು 2 ಇವರು ಪ್ಲಾಟ್‌ಗಳನ್ನು ಹಂಚಿಕೆ ಮಾಡುವ ಬಗ್ಗೆ ಠರಾವು ಪಾಸ್ ಮಾಡಿದ್ದು ಅದನ್ನು ನೀವು ಪ್ರಶ್ನೀಸಿದ್ದೀರಾ ಎಂದರೆ ಸಾಕ್ಷಿ ಠರಾವಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಮತ್ತು 2 ಸಂಘದ ಆಡಳಿತ ಮಂಡಳಿಯ ಸದಸ್ಯರಿಗೆ ಪ್ಲಾಟ್‌ಗಳನ್ನು ಹಂಚಿಕೆ ಮಾಡುವ ಅಧಿಕಾರ ಇದೆ ಎಂದರೆ ಸಾಕ್ಷಿ ಅವರು ಸಿನಿಯಾರಿಟಿ ಮೇಲೆ ಕೊಡಬೇಕು ಎಂದು ನುಡಿಯುತ್ತಾರೆ. ಮದನಿ ಸೊಸೈಟಿ ಬೈಲಾ ಸಂಖ್ಯೆ 37 ರಿಂದ 39 ರಲ್ಲಿ ಆಡಳಿತ ಮಂಡಳಿಯವರು ಪ್ಲಾಟ್‌ಗಳನ್ನು ಹಂಚಿಕೆ

ಮಾಡಬಹುದು ಎಂದು ನಮೂದಿಸಿದೆ ಎಂದರೆ ಸಾಕ್ಷಿ ಅವರು ಸಿನಿಯಾರಿಟಿ ಮೇಲೆ ಕೊಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

8. ಪ್ರತಿವಾದಿ ನಂ.3 ಮತ್ತು 4 ರವರ ವಿಳಿರುದ್ಧ ಸರ್ಕಾರಿ ಸಂಘಗಳ ಸಹಾಯಕ ನಿರ್ಬಂಧಕರು ಧಾರವಾಡ ಇವರಲ್ಲಿ ನಾನು ಅರ್ಜಿ ಸಲ್ಲಿಸಿ ಪ್ರತಿವಾದಿ ನಂ.3 ಮತ್ತು 4 ರವರ ಖರೀದಿ ಪತ್ರವನ್ನು ರದ್ದುಪಡಿಸಿ ಎಂದು ಕೇಳಿಕೊಂಡಿದ್ದೇನು ಎಂದರೆ ಸರಿ. ಸದರಿ ಅರ್ಜಿ ದಿಃ 14/09/2021 ರಂದು ವಜಾಗೊಂಡಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖರೀದಿ ರದ್ದುಪಡಿಸಲು ಅವರಿಗೆ ಅಧಿಕಾರ ಇಲ್ಲವೆಂದು ವಜಾಗೊಂಡಿದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿ ವಜಾಗೊಂಡ ನಂತರ ನಾನು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಪ್ರಾಧಿಕಾರ ಬೆಂಗಳೂರು ಇವರಲ್ಲಿ ಮೇಲ್ಮನವಿ ನಂ.188/2022, 190/2022 ಮತ್ತು 192/2022 ಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಗಳು ಸಹ ದಿಃ21/07/2023 ರಂದು ವಜಾಗೊಂಡಿವೆ ಎಂದರೆ ಸಾಕ್ಷಿ ಅವರಿಗೆ ಅಧಿಕಾರ ಇಲ್ಲವೆಂದು ವಜಾಗೊಂಡಿದೆ ಎಂದು ನುಡಿಯುತ್ತಾರೆ. ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಪ್ರಾಧಿಕಾರ ಬೆಂಗಳೂರು ಆದ ಆದೇಶದ ವಿರುದ್ಧ ನೀವೇನಾದರೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನಾನು ಅನುಮತಿ ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಮೇಲ್ಮನವಿಗಳಲ್ಲಿ ಪ್ರತಿವಾದಿ ನಂ.5 ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಅವರು ಆಸ್ತಿಯನ್ನು ಖರೀದಿಸಿರುತ್ತಾರೆಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಅನುಮತಿ ನೀಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಿಮಗೆ ದಾವಾ ಆಸ್ತಿಯನ್ನು ಖರೀದಿಸಲು ಅಧಿಕಾರ ಇಲ್ಲ ಹಾಗೂ ನಿಮ್ಮ ಖರೀದಿ ಪತ್ರ ಕಾನೂನುಬದ್ಧವಾಗಿ ಆಗಿಲ್ಲ ಎಂದು ಹೇಳಿ ನಾನು ಪ್ರತಿವಾದಿ ನಂ.5 ರವರಿಗೆ ಯಾವುದೇ ನೋಟೀಸ್ ಕಳುಹಿಸಿಲ್ಲ. ಮೇಲ್ಮನವಿ ನಂ.188/2022, 190/2022 ಮತ್ತು 192/2022 ಗಳಲ್ಲಿನ ಎಲ್ಲ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನಾವು ಬ್ಯಾಹಟ್ಟೆಯವರನ್ನು ಮಾತ್ರ ಮಾಡಿರುತ್ತೇವೆಂದು ನುಡಿಯುತ್ತಾರೆ.

9. ದಿಃ 15/09/2023 ರಂದು ನಮ್ಮ ವಕೀಲರು ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರಿಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿಯವರು ಸಹಕಾರ ಸಂಘಗಳ ನಿಬಂಧಕರು ಧಾರವಾಡ ಇವರಿಗೆ ಕ್ರಮ ತೆಗೆದುಕೊಳ್ಳಿ ಎಂದು ಹಿಂಬರಹ ನೀಡಿರುತ್ತಾರೆಂದರೆ ಸರಿ. ಸದರಿ ಹಿಂಬರಹದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ಪ್ರತಿವಾದಿ ನಂ.5 ಇವರು ದಿಃ21/08/2021 ರಂದು ಪ್ರಜಾವಾಣಿ

ದಿನಪತ್ರಿಕೆಯಲ್ಲಿ ಒಂದು ನೋಟೀಸ್ ನೀಡಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಸದರಿ ನೋಟೀಸಿಗೆ ನೀವು ಉತ್ತರ ನೀಡಿಲ್ಲ ಎಂದರೆ ಸಾಕ್ಷಿ ನೋಟೀಸ್ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ13/09/2021 ರಂದು ದಾವಾ ಆಸ್ತಿಯನ್ನು ಪ್ರತಿವಾದಿ ನಂ.5 ಇವರಿಗೆ ಮಾರಾಟ ಮಾಡಬೇಕೆಂದು ಪ್ರತಿವಾದಿ ನಂ.1 ರಿಂದ 2 ರವರಿಂದ ಪ್ರತಿವಾದಿ ನಂ.4 no objection ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ಅವರು ಅನುಮತಿ ಪಡೆದಿಲ್ಲ ಸುಳ್ಳು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.5 ದಾವಾ ಆಸ್ತಿ ವಿಷಯವಾಗಿ ಕಾನೂನುಬದ್ಧವಾಗಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನೊಂದಾಯಿತ ಖರೀದಿ ಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ಪಹಣಿಪತ್ರಿಕೆಯಲ್ಲಿ ಪ್ರತಿವಾದಿ ನಂ.5 ಇವರ ಹೆಸರು ದಾಖಲಾಗಿದೆ ಎಂದರೆ ಸರಿ. ಪ್ರತಿವಾದಿ ನಂ.5 ಇವರ ಹೆಸರು ಮ್ಯೂಟೇಶನ್ ಮಾಡಲು ಆದೇಶಿಸಿದ ಎಂಟ್ರಿಯನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೀಸಿಲ್ಲ ಆದರೆ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿ ನಂ.5 ದಾವಾ ಆಸ್ತಿಯನ್ನು ಖರೀದಿಸಿದಾಗಿನಿಂದ ಇದುವರೆಗೂ ಆಸ್ತಿ ತೆರಿಗೆಯನ್ನು ತುಂಬುತ್ತ ಬಂದಿರುತ್ತಾರೆ ಹಾಗೂ ಅವರ ಹೆಸರು ಆಸ್ತಿ ತೆರಿಗೆ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

10. ಪ್ರತಿವಾದಿ ನಂ.5 ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂಬುದು 2020 ರಲ್ಲಿ ಸೆಕ್ರೆಟರಿ ನೋಟೀಸ್ ನೀಡಿದಾಗ ಗೊತ್ತಾಗಿರುತ್ತದೆ. ಆ ರೀತಿ ಗೊತ್ತಾದ ನಂತರ ನಾನು ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ ಇದೆ, ಉತ್ತರಕ್ಕೆ ಬೇರೆಯವರ ಪ್ಲಾಟ್ ಇದೆ, ದಕ್ಷಿಣಕ್ಕೆ ಸರ್ವೆ ನಂ.103 ಪ್ಲಾಟ್ ಇದೆ ಮತ್ತು ಪಶ್ಚಿಮಕ್ಕೆ ನಾಲಾ ಇದೆ. ಸದರಿ ಚಕಬಂದಿಯನ್ನು ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

11. ನ್ಯಾಯಾಲಯಕ್ಕೆ ನಾನು ಸರಿಯಾದ ನ್ಯಾಯಾಲಯದ ಶುಲ್ಕ ಭರಣಾ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ನನಗೆ ಸೆಕ್ರೆಟರಿ ಮಾಹಿತಿ ನೀಡಿರುತ್ತಾರೆ ನಂತರ ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಾವೆ ಸಲ್ಲಿಸುವ ಸಮಯದಲ್ಲಿ ನಾನು ಮದನಿ ಸೊಸೈಟಿಯ ಸದಸ್ಯನಾಗಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ದಾವಾ ಅಸ್ತಿಯಲ್ಲಿ ನನಗೆ ಯಾವುದೇ ಹಕ್ಕುಹಿತಾಸಕ್ತಿ ಇಲ್ಲ ಆದರೂ ಸಹ ಪ್ರತಿವಾದಿ ನಂ.5 ಇವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ 5 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**